ಬೆಂಗಳೂರು ನಗರದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ

191 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಜನವರಿ 1990ರಿಂದ ಎಷ್ಟು ಹೊಸ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ?

ಆ) ಇವುಗಳಲ್ಲಿ ಎಷ್ಟು ಸಣ್ಣ ಪ್ರಮಾಣದ ಕೈಗಾರಿಕೆಗಳು ನಡೆಯುತ್ತಿವೆ ಮತ್ತು ರೋಗಗ್ರಸ್ಥ ಘಟಕಗಳೆಷ್ಟು?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):

ಅ) 1,408 (ಜನವರಿ 1990ರಿಂದ ಜನವರಿ 1991ರವರೆಗೆ)

ಆ) ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗ ಸೂಕ್ತಿಯಂತೆ ಸಣ್ಣ ಪ್ರಮಾಣದ ಕೈಗಾರಿಕೆಗಳು ರೋಗಗ್ರಸ್ಥವೆಂದು ಪರಿಗಣಿಸಬೇಕಾದರೆ ಅವುಗಳು ಸತತವಾಗಿ 5 ವರ್ಷಗಳ ಅವಧಿಯವರೆಗೆ ಕಾರ್ಯಾಚರಣೆ ಮಾಡುತ್ತಿರಬೇಕು. ಇಲ್ಲಿ ಕಾಲಮಿತಿ ಒಂದು ವರ್ಷ ಇರುವುದರಿಂದ (ಜನವರಿ 90ರಿಂದ ಜನವರಿ 91ರವರೆಗೆ) ಘಟಕಗಳು ರೋಗಗ್ರಸ್ಥಗಳೆಂದು ಪರಿಗಣಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷ್ಣ ಮೇಲ್ದಡೆ ಯೋಜನೆಗೆ ನಿಗಧಿಪಡಿಸಲಾದ ಅನುದಾನ

207 - ಶ್ರೀ ಪೆರಿಕಲ್ ಎಂ.ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿಗಾಗಿ ಕೃಷ್ಣ ಮೇಲ್ದಂಡೆ ಯೋಜನೆಗೆ ನಿಗಧಿಪಡಿಸಲಾದ ಅನುದಾನ ಎಷ್ಟು?

ಆ) ಅದರಲ್ಲಿ ಏಪ್ರಿಲ್ 1990ರಿಂದ ಜನವರಿ 1991ರ ಕೊನೆಯವರೆಗೆ ಖರ್ಚಾದ ಹಣ ಎಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ರೂ. 80 ಕೋಟಿಗಳು

ಆ) ರೂ. 51.66 ಕೋಟಿಗಳು

Karnataka Handloom Development Corporation Ltd., - showrooms in Bangalore City

Shri Perikal M. Mallappa (Chikpet) : will the Minister of State for Small Scale Industries pleased to state

a) The number of showrooms of Karnataka Handloom Development Corporation Ltd., are in Bangalore city places and area details may be furnished ?

b) The total amount of expenditure incurred during 1989-90 towards establishment, rent and other maintenance charges on these showrooms?

c) The total business transacted from these showrooms during 1989-90

Shri Naseer Ahamed (Minister of State for small Scale Industries) :

a) The Corporation has 13 showrooms in Bangalore City. Areawise details are furnished in Annexure -I

b) The total expenditure incurred during the year 1989-90 towards :